ಪಿ.ಡಬ್ಲ್ಯೂ.1

ಪ್ರಮಾಣ ವಚನ ಭೋದಿಸಿದ ದಿನಾಂಕಃ-09-02-2021
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಃ ಶ್ರೀ. ಡಿ ಜಿ ವಕೀಲರಿಂದಃ

ದಾವಾ ಆಸ್ತಿಗಳು ಪ್ರತಿವಾದಿಗಳ ಹೆಸರಿನಲ್ಲಿವೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲಾತಿಗಳ ಪ್ರಕಾರ ದಾವಾ ಹಾಕುವ ದಿನಾಂಕದಂದು ದಾವಾ ಆಸ್ತಿಗಳು ಪ್ರತಿವಾದಿಗಳ ಹೆಸರಿಲ್ಲಿದ್ದವು ಎಂದರೆ ಸರಿಯಲ್ಲ. ನಾನು ದಾವಾ ಹಾಕುವ ಸಮಯದಲ್ಲಿ ಸುಬ್ಬಣ್ಣರವರು ಬದುಕಿರಲಿಲ್ಲ ತೀರಿಹೋಗಿದ್ದರು. ಈ ರೀತಿಯಾಗಿ ದಾವಾ ಹಾಕುವ ಸಮಯದಲ್ಲ ಸುಬ್ಬಣ್ಣರವರ ಆಗಲೇ ತೀರಿಹೋಗಿದ್ದರಿಂದ ಅವರ ವಾರಸುದಾರರಾದ ಪ್ರತಿವಾದಿಗಳ ಹೆಸರಿನಲ್ಲಿ ದಾವಾ ಆಸ್ತಿಗಳ ಬಗ್ಗೆ ಕಂದಾಯ ದಾಖಲಾತಿಗಳು ಬಂದಿದ್ದವು ಎಂದರೆ ಸರಿಯಲ್ಲ. ದಾವಾ ಹಾಕುವ ಕಾಲಕ್ಕೆ ನಮ್ಮ ತಾತ ಸುಬ್ಬಣ್ಣನವರು ಸ್ವಾಧೀನ ಹೊಂದಿದ್ದರು. ದಾವಾ ಆಸ್ತಿ ಐಟಂ ನಂ.1 ರಿಂದ 6 ಮತ್ತು 9 ರಿಂದ 12 ಗಳು ಸರ್ಕಾರದವರು ವಜಾ ಪಡಿಸಿಕೊಂಡಿದ್ದಾರೆಂದರೆ ಸರಿ ಇದೆ. ಅವುಗಳನ್ನು ಕೆ.ಐ.ಎ.ಡಿ.ಬಿ ಇಲಾಖೆಯುವರಿಗೆ ಸ್ವಾಧೀನ ಪಡಿಸಿಕೊಂಡು ಕೈಗಾರಿಕೆಗೊಸ್ಕರ ಕೊಟ್ಟಿದ್ದಾರೆಂದರೆ ಸರಿ ಇದೆ. ಸದರಿ ಜಮೀನುಗಳನ್ನು ಯಾವ ದಿ ನಾಂಕದಂದು ಸ್ವಾಧೀನ ಪಡಿಸಿಕೊಂಡರು ಎಂದು ಗೊತ್ತಿಲ್ಲ, ಸಾಕ್ಷಿ ಹೇಳುತ್ತಾರೆ ದಾವಾ ಹಾಕುವಾಗಲೇ ಸರ್ಕಾರದವರು ಸದರಿ ಜಮೀನುಗಳನ್ನು ವಶಪಡಿಸಿಕೊಂಡಿದ್ದರು. ಈ ದಾವೆಯುನ್ನು ದಾಖಲು ಮಾಡುವುದಕ್ಕಿಂತ ಮುಂಚೆ ದಾವಾ ಆಸ್ತಿಗಳನ್ನು ಸರ್ಕಾರದವರು ವಶ ಪಡಿಸಿಕೊಂಡ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. 2006ನೇ ಇಸವಿಯಲ್ಲಿ ಸದರಿ ದಾವಾ ಆಸ್ತಿಗಳನ್ನು ಸರ್ಕಾರದವರು ಭೂಸ್ವಾ ಧೀನಪಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಹೇಳುತ್ತಾರೆ 2010 ರಲ್ಲಿ ನನಗೆ ಗೊತ್ತಾಯಿತು. 2010 ರಲ್ಲಿ ಈ ರೀತಿಯಾಗಿ ನನಗೆ ವಿಷಯು ಗೊತ್ತಾದ ನಂತರ ನಮ್ಮ ವಕೀಲರಿಗೆ ಆ ಬಗ್ಗೆ ಮಾಹಿತಿ ಕೊಟ್ಟಿಲ್ಲ. ಸರ್ಕಾರದವರು ವಶ ಪಡಿಸಿಕೊಂಡಿರುವ ಆಸ್ತಿಗಳಲ್ಲಿ ನನಗೂ ಕೂಡ ಪರಿಹಾರದ ಹಣದ ಭಾಗ ಇದೆ ಎಂದು ಪರಿಹಾರವನ್ನು ಈ ದಾವೆಯಲ್ಲಿ ಕೇಳಿಲ್ಲ ಎಂದರೆ ಸರಿ ಇದೆ.

ಸುಬ್ಬಣ್ಣನವರಿಗೆ 3 ಜನ ಗಂಡು ಮಕ್ಕಳು 3 ಜನ ಹೆಣ್ಣು ಮಕ್ಕಳಿರೆ. ಅವರ ಹೆಸರುಗಳು 1.ಅಶ್ವಥಮ್ಮ 2.ರಾಂಅಂಜಿನಪ್ಪ 3.ನರಸಿಂಹಮೂರ್ತಿ 4.ಸರಸ್ವತಮ್ಮ

ಪಿ.ಡಬ್ಲ್ಯೂ.1

5.ಶಾಮಣ್ಣ ಮತ್ತು 6.ಗಾಯಿತ್ರಮ್ಮ. ಸುಬ್ಬಣ್ಣನವರು 2002ನೇ ಇಸವಿಯಲ್ಲಿ ತೀರಿಕೊಂಡರು. ನಮ್ಮ ತಂದೆ ರಾಂಆಂಜಿನಪ್ಪ 1995 ರಲ್ಲಿ ತೀರಿಹೋದರು. 5ನೇ ಪ್ರತಿವಾದಿ ಮುನಿತಾಯಮ್ಮ ನನಗೆ ಸಂಬಂಧದಲ್ಲಿ ಏನಾಗಬೇಕು ಎಂಬುದು ಗೊತ್ತಿಲ್ಲ. ನನ್ನ ದಾವೆಯಲ್ಲಿ ಮುನಿತಾಯಮ್ಮನನ್ನು ರಾಂಆಂಜಿನಪ್ಪನ ಹೆಂಡತಿ ಎಂದು ಬರೆಸಿದ್ದೇನೆಂದರೆ ಸರಿ ಇದೆ.

ಈ ದಾವೆಯಲ್ಲಿ ಸಲ್ಲಿಸಿರುವ ವಂಶವೃಕ್ಷವನ್ನು ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ನಾನು ಸದರಿ ವಂಶವೃಕ್ಷದ ಮೇಲೆ ಸಹಿ ಹಾಕಿದ್ದೇನೆಂದರೆ ಸರಿಯಲ್ಲ. ಅದು ನನ್ನ ಸಹಿಯಲ್ಲ. ಸದರಿ ವಂಶವೃಕ್ಷದಲ್ಲಿ ರಾಂಆಂಜಿನಪ್ಪನಿಗೆ ಇಬ್ಬರು ಹೆಂಡತಿಯರು ಅವರುಗಳೆಂದರೆ 1.ನಾಗರತ್ನಮ್ಮ ಮತ್ತು 2.ಮುನಿತಾಯಮ್ಮ ಎಂಬುವವರು ಇದ್ದರು ಎಂದುಬರೆಸಿದ್ದೇನೆಂದೆ ಸರಿಯಲ್ಲ ಸದರಿ ಮುನಿತಾಯಮ್ಮನಿಗೆ ಅಭಿಲಾಶ ಎಂಬ ಮಗ ಇದ್ದಾನೆಂದರೆ ಸರಿಯಲ್ಲ. ಸದರಿ ಅಭಿಲಾಶನನ್ನು ಈ ದಾವೆಯಲ್ಲಿ ಕಕ್ಷಿದಾರರನ್ನಾಗಿ ಸೇರಿಸಿಲ್ಲ. ನಮ್ಮ ತಂದೆಯ 2ನೇ ಹೆಂಡತಿ ಮುನಿತಾಯಮ್ಮ ರಾಂಆಂಜಿನಪ್ಪನ 2ನೇ ಹೆಂಡತಿ ಎಂದು ಗೊತ್ತಿದ್ದರು ಕೂಡ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳತ್ತಿದ್ದೇನೆಂದರೆ ಸರಿಯಲ್ಲ. ನಾನು ಜನಿಸುವುದಕ್ಕಿಂತ ಪೂರ್ವದಲ್ಲಿ ನಮ್ಮ ತಾಯಿ ರಾಂಆಂಜಿನಪ್ಪನ ಜೊತೆಗೆ ಗಲಾಟೆ ಮಾಡಿಕೊಂಡು ವೈವಾಹಿಕ ಮನೆಯುನ್ನು ಬಿಟ್ಟು ತವರು ಮನೆಗೆ ಹೋಗಿದ್ದರು ಆ ಕಾರಣಕ್ಕೆ ರಾಂಆಂಜಿನಪ್ಪ ಬೇರೆ ಮದುವೆ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ.

3ನೇ ಪ್ರತಿವಾದಿ ಚಿಕ್ಕಬಳ್ಳಾಪುರದಲ್ಲಿ ವಾಸವಾಗಿದ್ದಾರೆ. ಅವರಿಗೆ ಈ ದಾವೆಯ ಸಮನ್ಸ್ ಜಾರಿಯಾಗಿದೆ. ಪ್ರತಿವಾದಿ ನಂ.3 ರವರು ಎಲ್ಲಿ ವಾಸವಾಗಿದ್ದರೆಂಬ ಬಗ್ಗೆ ಅವರ ಕುಟುಂಬದವರಿಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅವರು ಬದುಕಿರವ ಬಗ್ಗೆ ಮಾಹಿತಿ ಕೋರಿ ಅವರ ಕುಟುಂಬದವರು 1999 ರಲ್ಲಿ ಪೋಲೀಸರಿಗೆ ಕಾಣೆಯಾದ ಬಗ್ಗೆ ದೂರು ಕೊಟ್ಟಿದ್ದಾರೆಂದರೆ ಸರಿಯಲ್ಲ. ನಂತರ 2004 ರಲ್ಲಿ ಶಾಮಣ್ಣರವರ ಹೆಂಡತಿ ಕೂಡ ಆ ಬಗ್ಗೆ ಒಂದು ದೂರು ಕೊಟ್ಟಿದ್ದಾರೆಂದರೆ ಸರಿಯಲ್ಲ. ಶಾಮಣ್ಣನವರು ಹೆಂಡತಿ ಮತ್ತು ಮಕ್ಕಳಿಗೆ ಈವರೆವಿಗೂ ಶಾಮಣ್ಣ ಬದುಕಿರುವ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಪಿ.ಡಬ್ಲ್ಯೂ.1

ಸುಬ್ಬಣ್ಣನವರು ಬದುಕಿರುವಾಗ ಒಟ್ಟು ಕುಟುಂಬದ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ದಿ:26.09.1994ರಲ್ಲಿ ಐಟಂ.ನಂ.9 ನ್ನು ಸುಬ್ಬಣ್ಣನವರು ತಾವು ಬದುಕಿರುವಾಗಲೇ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಸದರಿ ಆಸ್ತಿಯ ಕ್ರಯಪತ್ರಕ್ಕೆ ನಮ್ಮ ತಂದೆ ಸಾಕ್ಷಿ ಎಂದು ಸಹಿಮಾಡಿದ್ದಾರೆಂದರೆ ಸರಿಯಲ್ಲ. ಸುಬ್ಬಣ್ಣನವರು ಬರೆಸಿದ ವಿಭಾಗ ಪತ್ರದಲ್ಲಿ ತನ್ನ ಹಾಗೂ ತನ್ನ ಮಕ್ಕಳ ಮದ್ಯೆ ಅದ ಪಾಲುವಿಭಾಗದಲ್ಲಿ ಸುಬ್ಬಣ್ಣನವರು ಭಾಗಕ್ಕೆ ಬಂದ ಆಸ್ತಿಗಳನ್ನು ಮಾರಾಟ ಮಾಡಿದ್ದೇನೆಂದು ಬರೆಸಿದ್ದಾರೆಂದರೆ ಸರಿಯಲ್ಲ. ದಿ:28.02.1996 ರಲ್ಲಿ ದಾವಾ ಆಸ್ತಿ ಐಟಂ.12 ರ ಕ್ರಯಪತ್ರದಲ್ಲಿ ಕೂಡ ಸುಬ್ಬಣ್ಣ ತಮ್ಮ ಭಾಗಕ್ಕೆ ಬಂದ ಆಸ್ತಿಗಳನ್ನು ದಿ:27.03.1983 ರಂದು ಮಾರಾಟ ಮಾಡಿದ್ದೇನೆಂದು ಬರೆಸಿದ್ದಾರೆಂದರೆ ಸರಿಯಲ್ಲ.

ನರಸಿಂಹಮುರ್ತಿ ಬದುಕಿದ್ದಾರೆ, ಅವರು ನನಗೆ ಚಿಕ್ಕಪ್ಪನಾಗಬೇಕು. ಸದರಿ ನರಸಿಂಹಮೂರ್ತಿ ರವರು ದಿ:15.12.1983 ರಲ್ಲಿ ತಮ್ಮ ಭಾಗಕ್ಕೆ ಬಂದ ಆಸ್ತಿಯನ್ನು ಎಂದರೆ ಐಟಂ ನಂ.11 ನ್ನು ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಈ ಮೇಲೆ ಹೇಳಿದ ಎಲ್ಲಾ ಕರಯಪತ್ರಗಳನ್ನು ಪ್ರಶ್ನಿಸಿ, ನಮ್ಮ ತಂದೆ ಯಾವುದೇ ದಾವೆಯನ್ನು ಅಥವಾ ಬೇರೆ ಪ್ರಕರಣವನ್ನು ದಾಖಲಿಸಿಲ್ಲ. ನಮ್ಮ ತಂದೆ ಏಕೆ ಸದರಿ ಕ್ರಯಪತ್ರಗಳನ್ನು ಪ್ರಶ್ನಿಸಿಲ್ಲ ಎಂದರೆ ಆಗಲೇ ಅವರು ತಮಗೆ ಬರಬೇಕಾದ ಭಾಗವನ್ನು ಒಟ್ಟು ಕುಟುಂಬದ ಆಸ್ತಿಗಳಲ್ಲಿ ಪಡೆದುಕೊಂಡಿದ್ದರು ಆ ಕಾರಣಗಳಿಂದ ಸುಬ್ಬಣ್ಣನವರು ಮತ್ತು ನರಸಿಂಹಮುರ್ತಿರವರ ಮಾರಾಟ ಮಾಡಿದ ಕ್ರಯಪತ್ರಗಳನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

ನಮ್ಮ ತಂದೆ ರಾಂಆಂಜಿನಪ್ಪನವರ ಹೆಸರಿನಲ್ಲಿರುವ ಆಸ್ತಿಗಳು ಈಗಲೂ ಮುನಿತಾಯಮ್ಮ ಅವರ ಹೆಸರಿನಲ್ಲಿ ಬರುತ್ತಿವೆ ಎಂದರೆ ಸರಿಯಲ್ಲ, ಸಾಕ್ಷಿ ಹೇಳತ್ತಾರೆ ಇನ್ನು ಭಾಗ ಆಗಿಲ್ಲ. ಸರ್ವೆನಂ.39 ಈಗಲು ಕೂಡ ಮುನಿತಾಯಮ್ಮ ಕೋಂ ರಾಂಆಂಜಿನಪ್ಪರವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿಯಲ್ಲ. ನಮ್ಮ ತಂದೆ ಆಸ್ತಿ ಮುನಿತಾಯಮ್ಮನ ಹೆಸರಿನಲ್ಲಿ ಇದ್ದರೂ ಕೂಡ ನ್ಯಾಯಾಲಯಕ್ಕೆ ಸತ್ಯಾಂಶವನ್ನು ಮರೆಮಾಚಿ ಸುಳ್ಳು ದಾವೆಯನ್ನು ಹಾಕಿದ್ದೇವೆಂದರೆ ಸರಿಯಲ್ಲ. ಸುಬ್ಬಣ್ಣನವರು ಬದುಕಿರುವ ಕಾಲಕ್ಕೆ ಅವರು ಮತ್ತು ಅವರ ಮಕ್ಕಳ ಮದ್ಯೆ ಪಾಲುವಿಭಾಗ ಆದ ಕಾರಣಕ್ಕೆ ಪ್ರತಿವಾದಿಗಳು ತಮಗೆ ಬಂದ ಭಾಗದ ಆಸ್ತಿಯಲ್ಲಿ ಸ್ವಾಧಿನಾನುಭವ ಹೊಂ

ಪಿ.ಡಬ್ಲ್ಯೂ.1

ದಿದ್ದಾರೆಂದರೆ ಸರಿಯಲ್ಲ. 2005-06ರಲ್ಲಿ ಶಾಮಣ್ಣನ ಆಸ್ತಿ ಸಂಬಂಧವಾಗಿ ಆರ್ ಆರ್ ಟಿ ಪ್ರಕರಣದಲ್ಲಿ ತಹಸೀಲ್ದಾರವರ ನ್ಯಾಯಾಲಯದಲ್ಲಿ ಒಂದು ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸದರಿ ಆರ್ ಆರ್ ಟಿ ಪ್ರಕರಣದಲ್ಲಿ ತಹಸೀಲ್ದಾರವರು ಸುಬ್ಬಣ್ಣನವರು ಬದುಕಿರುವಾಗ ಆದಂತಹ ಪಾಲುವಿಭಾಗದ ಪ್ರಕಾರ ಆ ಪ್ರಕಾರಣದಲ್ಲಿರುವ ಆಸ್ತಿಗಳು ಪ್ರತಿವಾದಿಗಳಿಗೆ ಸೇರಿದ ಆಸ್ತಿಗಳು ಎಂದು ಆದೇಶ ಹೊರಡಿಸಿದ್ದಾರೆಂದರೆ ಸರಿಯಲ್ಲ. ತಹಸೀಲ್ದಾರವರ ಆದೇಶವನ್ನು ಪ್ರಶ್ನಿಸಿ ನಾನು ಮೇಲ್ಮನವಿ ಮಾಡಿದ ಬಗ್ಗೆ ನೆನಪಿಲ್ಲ.

ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರ ರವರು ಛಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಎಂ.ಬಿ ಕುಲಕರ್ಣಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.

ಪಿ.ಡಬ್ಲ್ಯೂ.1